



# ಸುದ್ದಿ-ಸಂಚಾರಿ

ಇದು ನಮ್ಮೂರ ಸುದ್ದಿ ವಾಹಿನಿ


**ಮೇಘನಾ**

ಯುಪಿಎಸ್ಸಿ ಪರೀಕ್ಷೆಯಲ್ಲಿ 589 ನೇ ರ್‍ಯಾಂಕ್


ಗುರುವಾರ,18ನೇ ಏಪ್ರಿಲ್,2024 | ● ಸಂಪುಟ-1 | ● ಸಂಚಿಕೆ-58 | ● ಉಚಿತ | ● | ● www.suddisanchaari.in




## ಬಾವಿಗೆ ಬಿದ್ದು ಮಗು ಸಾವು

ಸುದ್ದಿ ಸಂಚಾರಿ | ಸಾಗರ

ಸಾಗರ: ಇಲ್ಲಿನ ಎಸ್.ಎನ್. ನಗರ ಬಡಾವಣೆಯ ಗ್ಯಾಸ್ ಗೋಡೌನ್ ಸಮೀಪ ಆಟವಾಡುತ್ತಿದ್ದಾಗ ಆಯತಪ್ಪಿ ಬಾವಿಗೆ ಬಿದ್ದು ಮನ್ನತ್ ಎಂಬ ಮೂರು ವರ್ಷದ ಹೆಣ್ಣು ಮಗು ಮೃತಪಟ್ಟಿರುವ ಘಟನೆ ಬುಧವಾರ ನಡೆದಿದೆ.

ಮನೆಯ ಹಿಂಭಾಗದಲ್ಲಿ ಆಟವಾಡುತ್ತಿದ್ದ ಮಗು ಆಕಸ್ಮಿಕವಾಗಿ ಬಾವಿಗೆ ಬಿದ್ದ ಕೂಡಲೆ, ತಾಯಿ ಕೂಗಿಕೊಂಡು ಅಕ್ಕಪಕ್ಕದವರನ್ನು ಕರೆದಿದ್ದಾರೆ. ಸ್ಥಳೀಯರು ಮಗುವನ್ನು ಮೇಲಕ್ಕೆ ಎತ್ತಿದರೂ ಹಣೆ ಹಾಗೂ ತಲೆಗೆ ತೀವ್ರ ಪೆಟ್ಟಾಗಿದ್ದರಿಂದ ಮನ್ನತ್ ಮೃತಪಟ್ಟಿದ್ದಾಳೆ.

**Top News** ಮುಗಳಿಗೆರೆ ಬೀರಲಿಂಗೇಶ್ವರ ದೇವಸ್ಥಾನ

## ರಾಘವೇಂದ್ರಗೆ ಕುರಿ ಕೊಟ್ಟು, ಕರಿ ಕಂಬಳಿ ಹೊದಿಸಿ ಸನ್ಮಾನ

ಸುದ್ದಿ-ಸಂಚಾರಿ ಶಿಕಾರಿಪುರ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಸಂಸದ ಬಿ.ವೈ.ರಾಘವೇಂದ್ರ ಗುರುವಾರ ನಾಮಪತ್ರ ಸಲ್ಲಿಸುತ್ತಿರುವ ಹಿನ್ನಲೆಯಲ್ಲಿ ಬುಧವಾರ ತಾಲ್ಲೂಕಿನ ವಿವಿಧ ದೇವಸ್ಥಾನಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ಕುಟುಂಬದ ಸದಸ್ಯರು ಮಹತ್ವದ ಕಾರ್ಯ ಮಾಡುವ ಮುನ್ನ ಶಿಕಾರಿಪುರದ ಆರಾಧ್ಯ ದೈವ ಹುಚ್ಚರಾಯ ಸ್ವಾಮಿ ಪೂಜೆ ಸಲ್ಲಿಸಿ ಆರಂಭಿಸುವುದು ವಾಡಿಕೆ.ಅದರಂತೆ ಮುಗಳಗೆರಿ ಬೀರಲಿಂಗೇಶ್ವರ ದೇವಸ್ಥಾನ ಹಾಗೂ ಶಿಕಾರಿಪುರದ ರಾಘವೇಂದ್ರ ಸ್ವಾಮಿ ಮಠಕ್ಕೆ ದಂಪತಿ ಸಹಿತ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಪಕ್ಷ ಕಾರ್ಯಕರ್ತರು ಉಪಸ್ಥಿತರಿದ್ದು ಬಿ.ವೈ.ರಾಘವೇಂದ್ರ ಅವರಿಗೆ ಶುಭಕೋರಿದರು.

ಮುಗುಳುಗೆರೆ ಗ್ರಾಮದಲ್ಲಿರುವ ಶ್ರೀ ಬೀರಲಿಂಗೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದ ಸಂಸದ ಬಿ.ವೈ.ರಾಘವೇಂದ್ರ ಅವರನ್ನು ಅಭಿಮಾನಿಗಳು ಕಂಬಳಿ ಹಾಗೂ ಕುರಿ ಹೊದಿಸಿ ಸನ್ಮಾನಿಸಿ ಶುಭ ಹಾರೈಸಿದರು.

ಚುರ್ಚಿಗುಂಡಿಯಲ್ಲಿ ಶ್ರೀ ವೀರಭದ್ರೇಶ್ವರ ಮತ್ತು ಭದ್ರಕಾಳಿಯ ಜಾತ್ರಾ ಮಹೋತ್ಸವದ ರಥೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಶಾಸಕರಾದ ಶ್ರೀ ರುದ್ರೇಗೌಡ, ಪ್ರಮುಖರಾದ ಶ್ರೀ ಹನುಮಂತಪ್ಪ , ಶ್ರೀ ಗುರುಮೂರ್ತಿ, ಶ್ರೀಮತಿ ಗಾಯತ್ರಿ ಮಲ್ಲಪ್ಪ, ಶ್ರೀ ಮಾಜಿ ರಾಘವೇಂದ್ರ, ಶ್ರೀ ಬಸವರಾಜ್ , ಶ್ರೀ ಪ್ರವೀಣ್, ಶ್ರೀ ಭದ್ರಾಪುರ ಹಾಲಪ್ಪ, ಶ್ರೀ ಸಿದ್ದಲಿಂಗಪ್ಪ , ಶ್ರೀ ಬಸವರಾಜ್, ಶ್ರೀ ವೀರಣ್ಣ, ಶ್ರೀ ಭದ್ರಾಪುರ ಹಾಲಪ್ಪ, ಶ್ರೀಮತಿ ನಿವೇದಿತಾ ಹಾಗೂ ಅನೇಕ ಮುಖಂಡರು ಉಪಸ್ಥಿತರಿದ್ದರು.

## ಬಿವೈಆರ್ ನಾಮಪತ್ರ ಸಲ್ಲಿಕೆ



ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸಂಸದ ಬಿ.ವೈ.ರಾಘವೇಂದ್ರ ಗುರುವಾರ ನಾಮಪತ್ರ ಸಲ್ಲಿಸಲಿದ್ದಾರೆ. ಬೆಳಿಗ್ಗೆ 10ಕ್ಕೆ ಶಿವಮೊಗ್ಗದ ರಾಮಣ್ಣ ಶ್ರೇಷ್ಠಿ ಪಾರ್ಕ್‌ನಿಂದ ನಾಮಪತ್ರ ಸಲ್ಲಿಕೆಗೆ ಮೆರವಣಿಗೆ ಆರಂಭವಾಗಲಿದೆ. ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಎಚ್.ಡಿ.ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ನಾಮಪತ್ರ ಸಲ್ಲಿಕೆ ವೇಳೆ ಹಾಜರಿರಲಿದ್ದಾರೆ.

## ಮಲ್ಲಿಕಾರ್ಜುನ ಹಕ್ರೆ ಇಂದು ಬಿಜೆಪಿ ಸೇರ್ಪಡೆ



ಸುದ್ದಿ-ಸಂಚಾರಿ

ಸಾಗರ: 'ನನ್ನ ಬಗ್ಗೆ ನಿರ್ಲಕ್ಷ್ಯ ಧೋರಣೆ ತಾಳುತ್ತಿರುವ ಕಾಂಗ್ರೆಸ್‌ನ ಜಿಲ್ಲಾ ಹಾಗೂ ತಾಲ್ಲೂಕು ಘಟಕದ ಮುಖಂಡರ ಧೋರಣೆ ಖಂಡಿಸಿ ಬಿಜೆಪಿಗೆ ಸೇರ್ಪ ಡೆಯಾಗುತ್ತಿದ್ದೇನೆ' ಎಂದು ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಹಕ್ರೆ ತಿಳಿಸಿದ್ದಾರೆ.

ಕಳೆದ 30 ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿದ್ದು ವಿವಿಧ ಹುದ್ದೆಗಳನ್ನು ನಿರ್ವ ಹಿಸಿದ್ದೇನೆ. ಈಗ ಅನಿವಾರ್ಯವಾಗಿ ಪಕ್ಷ ತೊರೆಯುತ್ತಿದ್ದೇನೆ. ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ ಸಮ್ಮುಖದಲ್ಲಿ ಸೇರ್ಪಡೆಯಾವುದಾಗಿ ತಿಳಿಸಿದರು.'ಚುನಾವಣೆ ಸಂದರ್ಭದಲ್ಲಿ ತಮ್ಮ ಪರವಾಗಿ ಕೆಲಸ ಮಾಡಿದವರನ್ನು ಗೆದ್ದ ನಂತರ ದೂರ ಇಡುವ ಪ್ರವೃತ್ತಿ ಶಾಸಕ ಗೋಪಾಲಕೃಷ್ಣ ಬೇಳೂರು ಅವರಲ್ಲಿದೆ.ನಮ್ಮ ಕಡೆಯ ಕಾರ್ಯಕರ್ತರು ಅರ್ಜಿ ಹಿಡಿದು ಹೋದರೆ 'ಮಲ್ಲಿಕಾರ್ಜುನ ಹಕ್ರೆ ಹತ್ತಿರ ಕೆಲಸ ಮಾಡಿಸಿಕೊಳ್ಳಿ'. ಎಂಬುದಾಗಿ ಶಾಸಕರು ಹೇಳುವುದು ಎಷ್ಟು ಸರಿ' ಎಂದು ಪ್ರಶ್ನಿಸಿದರು.

'ಹಿರಿಯರನ್ನು ... ಹಾಗೂ ಪಕ್ಷದ ಪ್ರಮುಖರನ್ನು ಒಟ್ಟಿಗೆ ಕರೆದೊಯ್ಯು- ವಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಕೂಡ ವಿಫಲರಾಗಿದ್ದಾರೆ. ಈ ಎಲ್ಲಾ ಬೆಳವಣಿಗೆಗಳಿಂದ ಬೇಸತ್ತು ಕಾಂಗ್ರೆಸ್ ತೊರೆಯುತ್ತಿದ್ದೇನೆ' ಎಂದರು.

“ಬೇಳೂರು ಶಾಸಕರಾದ ನಂತರ ಕ್ಷೇತ್ರದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಅಕ್ರಮ ಮರಳು ಸಾಗಾಣಿಕ ಮಾಫಿಯಾ ಮತ್ತೆ ತಲೆ ಎತ್ತಿ ನಿಂತಿದೆ. ಹಾಲಪ್ಪ ಅವರು ಶಾಸಕರಾಗಿದ್ದಾಗ ಮದ್ಯ ಮಾರಾಟ ಮಳಿಗೆಗೆ ಹೆಚ್ಚಿನ ಸಂಖ್ಯೆಯಲ್ಲಿ ಅವಕಾಶ ನೀಡಿದ್ದಾರೆ ಎಂದು ಬೇಳೂರು ಆರೋಪಿಸಿದ್ದರು. ಆದರೆ ಈಗ ಮಾಸೂರು ಗ್ರಾಮದಲ್ಲಿ ಬೇಳೂರು ಕಡೆಯವರು ಮದ್ಯದಂಗಡಿ ಆರಂಭಿಸಿದ್ದಾರೆ' ಎಂದರು.

ಗಣಪತಿ ಹೆನಗೆರೆ, ಸ್ವಾಮಿ ಗೌಡ, ನಾಗರಾಜ್, ವೆಂಕಟೇಶ್, ಅರುಣ್ ಪೂಜಾರಿ, ಕೃಷ್ಣಮೂರ್ತಿ, ನಾಗರಾಜ್ ಮಜ್ಜಿಗೆರೆ ಇದ್ದರು.

# ಸುದ್ದಿ-ಸಂಚಾರಿ

ಇದು ನಮ್ಮೂರ ಸುದ್ದಿ ವಾಹಿನಿ

**ಅಂಬೇಡ್ಕರ್**

ನಾನು ಒಂದು ಸಮುದಾಯದ ಬೆಳವಣಿಗೆಯನ್ನು ಅಳೆಯುವುದು ಅಲ್ಲಿರುವ ಮಹಿಳೆಯರು ಎಷ್ಟು ಪ್ರಮಾಣದ ಪ್ರಗತಿ ಸಾಧಿಸಿದ್ದಾರೆ ಎಂಬುದರ ಮೇಲೆ.

ಗುರುವಾರ,18ನೇ ಏಪ್ರಿಲ್,2024 | ● ಸಂಪುಟ-1 | ● ಸಂಚಿಕೆ-58 | ● ಉಚಿತ | ● | ● www.suddisanchaari.in



ಸೊರಬ

ತಾಲೂಕಿನ ತತ್ತೂರು ವಡ್ಡಿಗೇರಿ ಸರ್ಕಾರಿ ಶಾಲೆಯಲ್ಲಿ ಏ. 14 ರಂದು ಭಾನುವಾರ ಹಮ್ಮಿಕೊಂಡಿದ್ದ ಡಾ. ಬಿ. ಆರ್ ಅಂಬೇಡ್ಕರ್ ಅವರ 133 ನೇ ಜಯಂತಿ ಕಾರ್ಯಕ್ರಮವನ್ನು ಪ್ರಗತಿಪರ ಚಿಂತಕ ಕೆ. ದೇವೇಂದ್ರಪ್ಪ ಉದ್ಘಾಟಿಸಿದರು

**Top News** ಪತ್ರಕರ್ತ ದೇಶಾದ್ರಿ ಹೊಸ್ಮನೆ ಅಭಿಮತ

# ಅಂಬೇಡ್ಕರ್ ಸರ್ವ ಜನರ ಹಿತ ಬಯಸಿದ ಅಪರೂಪದ ನಾಯಕ

ಸುದ್ದಿ-ಸಂಚಾರಿ
ಸೊರಬ:
ಮಹಾನ್ ಮಾನವತವಾದಿ ಡಾ. ಬಿ. ಆರ್.ಅಂಬೇಡ್ಕರ್ ಅವರನ್ನು ಈ ದೇಶದ ಒಂದು ಮೇಲ್ವರ್ಗ ಒಂದು ಜಾತಿಗೆ ಸಿಮೀತಗೊಳಿಸುವ ಹುನ್ನಾರವನ್ನು ಮೊದಲಿನಿಂದಲೂ ಮಾಡುತ್ತಾ ಬಂದಿದೆ. ಆದರೆ ಅಂಬೇಡ್ಕರ್ ಸರ್ವ ಜನರ ಹಿತ ಬಯಸಿದ ಅಪರೂಪದ ವಿಶ್ವ ನಾಯಕ ಎಂದು ಹಿರಿಯ ಪತ್ರಕರ್ತ ದೇಶಾದ್ರಿ ಹೊಸ್ಮನೆ ಪ್ರತಿಪಾದಿಸಿದರು.ತಾಲೂಕಿನ ತತ್ತೂರು ವಡ್ಡಿಗೇರಿ ಸರ್ಕಾರಿ ಶಾಲೆಯಲ್ಲಿ ಏ. 14 ರಂದು ಭಾನುವಾರ ಹಮ್ಮಿಕೊಂಡಿದ್ದ ಡಾ. ಬಿ. ಆರ್ ಅಂಬೇಡ್ಕರ್ ಅವರ 133 ನೇ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.ಶೋಷಿತ ಸಮಯದಾಯದಿಂದ ಬಂದ ಅಂಬೇಡ್ಕರ್ ಶೋಷಿತ ಜನರ ವಿಮೋಚನೆಗಾಗಿ ಹೋರಾಡಿದ್ದು ನಿಜವಾದರೂ ಅವರು ಎಂದಿಗೂ ಬ್ರಾಹ್ಮಣ ರನ್ನಾಗಲಿ ಅಥವಾ ಮೇಲ್ವರ್ಗದ ಜನರನ್ನಾಗಲಿ ಎಂದಿಗೂ ವಿರೋಧಿಸಿದವರಲ್ಲ. ಅವರು ಹಿಂದೂ ಧರ್ಮದೊಳಗಿನ ಕೊಳಕನ್ನು, ಜಾತಿ ಶೋಷಣೆಗೆ ಕಾರಣವಾದ ಮನುಸ್ಮೃತಿಯನ್ನು, ಮೂಢನಂಬಿಕೆಗಳನ್ನು ಪೋಷಿಸುತ್ತಾ ಬಂದ ಬ್ರಾಹ್ಮಣ್ಯವನ್ನು ವಿರೋಧಿಸುತ್ತಾ ಬಂದವರು. ಇಷ್ಟಾಗಿಯೂ ಅವರನ್ನು ಒಂದು ಜಾತಿಗೆ ಕಟ್ಟಿ ಹಾಕುವ ಮೂಲಕ ಅವರ ಜನಪ್ರಿಯತೆಯನ್ನು, ಆದರ್ಶ ಯುತ ಜೀವನವನ್ನು ಮುಗಿಸುವ ಹುನ್ನಾರ ನಡೆದಿದ್ದು ದುರಂತ ಎಂದು ವಿಷಾದಿಸಿದರು.ಅಂಬೇಡ್ಕರ್ ಇಡೀ ವಿಶ್ವವೇ ಮೆಚ್ಚಿಕೊಂಡ ನಾಯಕ. ಆವರೇ ನಿಜವಾದ ವಿಶ್ವನಾಯಕ. ದುರಂತವೆಂದರೆ ಅಂತಹ ನಾಯಕರ ಯಾವ ಮೌಲ್ಯವೂ ಇಲ್ಲದ ನಾಯಕರು ಇವತ್ತು ತಾವು ವಿಶ್ವ ನಾಯಕ ಎಂದುಕೊಳ್ಳುತ್ತಿರುವುದು ವಿಪರ್ಯಾಸವೆ ಆಗಿದೆ ಎಂದರು.ಕಾರ್ಯಕ್ರಮ ಉದ್ಘಾಟಿಸಿದ ಪತ್ರಕರ್ತ ಹಾಗೂ ಪ್ರಗತಿಪರ ಚಿಂತಕ ಕೆ. ದೇವೇಂದ್ರಪ್ಪ, ಶೋಷಿತ ಸಮುದಾಯ ಕ್ಕೆ ಅಂಬೇಡ್ಕರ್ ಎಂದೆಂದಿಗೂ ಮರೆಯಲಾಗದ ಚೇತನ. ಶೋಷಿತ ಸಮಾಜದ ಜನರು ಹಿಂದಿಗಿಂತ ಇಂದು ಅವರನ್ನು ಹೆಚ್ಚಾಗಿ ಹೊತ್ತು ಮೆರೆಯಬೇಕಿದೆ.ಅವರ ಆದರ್ಶಗಳನ್ನು ರೂಡಿಸಿಕೊಂಡು ಅವರ ಚಿಂತನೆಗಳನ್ನು ಸಮಾಜದ ಪ್ರತಿಯೊಬ್ಬರಿಗೂ ತಲುಪಿಸಬೇಕಿದೆ. ವಿದ್ಯಾವಂತ ಸಮೂಹ ಈ ಕೆಲಸ ಮಾಡಬೇಕಿದೆ ಎಂದರು.ಅಂಬೇಡ್ಕರರು ಮಹರ್ ಜಾತಿ ಯಲ್ಲಿ ಹುಟ್ಟಿದ್ದರಿಂದ ಜಾತಿಯತೆಯ ಕಠೋರ ಅನುಭವ ಕಾಣಬೇಕಾಯಿತು. ಆ ನೋವಿನ ಹೋರಾಟದ ಅನುಭವದಿಂದಾಗಿಯೇ ಸಮಾಜದಲ್ಲಿರುವ ಎಲ್ಲರಿಗೂ ಅನುಕೂಲವಾಗು ವಂತಹ ಸಂವಿಧಾನ ಕೊಟ್ಟರು. ಅದು ಅವರ ಮಾನವೀಯ ಗುಣಕ್ಕೆ ಸಾಕ್ಷಿ ಎಂದರು.ಈ ಹಿಂದೆ ಅಂಬೇಡ್ಕರರನ್ನು ಆಸ್ಪೃಶ್ಯರ ನಾಯಕ ಎಂದು ನೋಡಲಾಗುತ್ತಿತ್ತು. ಈಗ ಬದಲಾದ ಪರಿಸ್ಥಿಯಲ್ಲಿ ಅವರಲ್ಲಿದ್ದ ಜ್ಞಾನ, ವಿದ್ವತ್ತಿನ ಕಾರಣಕ್ಕಾಗಿ ಅನಿವಾರ್ಯವಾದ ಕಾರಣಕ್ಕಾಗಿ ಅನಿವಾರ್ಯವಾಗಿ ಒಪ್ಪಿಕೊಳ್ಳುವಂತಾಗಿದೆ ಎಂದರು.ಯುವ ಮುಖಂಡರಾದ ನಾಗರಾಜ್ ಮಾಳೆಕೊಪ್ಪ, ಪಶಯ ವೈದ್ಯ ಇಲಾಖೆಯ ರಂಗಪ್ಪ ಶಿರಳ್ಳಿ ಅವರು ಮಾತನಾಡಿ, ಶೋಷಿತ ಸಮಾಜದ ಜನರ ಬದುಕುಹಸನಾಗುವುದಕ್ಕೆ ಕಾರಣವಾದ ಅಂಬೇಡ್ಕರ್ ಅವರನ್ನು ನಮ್ಮ ಸಮಾಜ ಇನ್ನು ಅರ್ಥ ಮಾಡಿಕೊಳ್ಳಬೇಕಿದೆ. ನಿಜವಾದ ದೇವರನ್ನು ಅವರಲ್ಲಿ ಕಾಣಬೇಕಿದೆಎಂದರು. ಶಾಲೆಯ ಮುಖ್ಯ ಶಿಕ್ಷಕ ಕೆ.ಬಸವಂತಪ್ಪ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ್ದರು. ಸಹ ಶಿಕ್ಷಕ ಲೋಕಪ್ಪ ಅವರು ಸ್ವಾಗತಿಸಿದರು. ಶಿಕ್ಷಕಿ ಸೌಭಾಗಮ್ಮ ಅವರು ಕಾರ್ಯಕ್ರಮ ನಿರೂಪಿಸಿದರು. ವೇದಿಕೆಯಲ್ಲಿ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಕೆ.ಶಿವಮೂರ್ತಿ, ಶಿಕ್ಷಕಿಯರಾದ ನಮಿತಾ , ಸೀತಮ್ಮ, ಶಾಲಾ ಅಭಿವೃದ್ಧಿ ಸಮಿತಿ ಸದಸ್ಯ ನಿಂಗಪ್ಪ, ಮುಖಂಡ ಪಕ್ಕಿರಪ್ಪ ಇದ್ದರು.

## ಅಪಘಾತ ಬೈಕ್ ಸವಾರ ಸಾವು

**ಸುದ್ದಿಸಂಚಾರಿ** | ಆನವಟ್ಟಿ

ಆನವಟ್ಟಿ: ಇಲ್ಲಿನ ಬಾವಿಕಟ್ಟೆ ಚೌಡಮ್ಮ ವೃತ್ತದ ಮುಂದಿನ ರಸ್ತೆ ವಿಭಜಕಕ್ಕೆ ಬೈಕೊಂದು ಡಿಕ್ಕಿ ಹೊಡೆದಿದ್ದರಿಂದ ಯುವಕ ಸ್ಥಳದಲ್ಲೇ ಮೃತಪಟ್ಟಿದ್ದು, ಇಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ. ಮಂಗಳವಾರ ರಾತ್ರಿ ಮೂವರು ಯುವಕರು ಬೈಕ್‌ನಲ್ಲಿ ಸಂಚರಿಸುತ್ತಿದ್ದರು. ಅದು ನಿಯಂತ್ರಣ ಕಳೆದುಕೊಂಡು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಹಾನಗಲ್ ತಾಲ್ಲೂಕಿನ ಹೊಸೂರು ಗ್ರಾಮದ ಕಾರ್ತಿಕ್ (19) ಸ್ಥಳದಲ್ಲೇ ಅಸುನೀಗಿದ್ದಾರೆ.ಅದೇ ಗ್ರಾಮದ ಕಾರ್ತಿಕ್ ಹಾಗೂ ಶಕುನವಳ್ಳಿ ಗ್ರಾಮದ ಮಂಜಪ್ಪ ಅವರಿಗೆ ತೀವ್ರ ಗಾಯಗಳಾಗಿದ್ದು, ಆನವಟ್ಟಿ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಆಸ್ಪತ್ರೆಯೊಂದಕ್ಕೆ ಸೇರಿಸಲಾಗಿದೆ. ಆನವಟ್ಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಗ್ಯಾರಂಟಿ ಯೋಜನೆ ಪ್ರಚಾರಕ್ಕೆ ಸಮಿತಿ ರಚನೆ



ಸುದ್ದಿ-ಸಂಚಾರಿ
ಶಿವಮೊಗ್ಗ
ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಹಾಗೂ ಎಐಸಿಸಿಯಿಂದ ಘೋಷಿಸಿರುವ ಗ್ಯಾರಂಟಿ ಯೋಜನೆಗಳನ್ನು ಬೂತ್ ಮಟ್ಟದ ಪ್ರತಿ ಮನೆಗಳಿಗೆ ತಲುಪಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಹೇಳಿದರು.

ಜಿಲ್ಲಾ ಕಾಂಗ್ರೆಸ್ ಪಕ್ಷದ ವತಿಯಿಂದ ಇವತ್ತು ಗ್ಯಾರಂಟಿ ಯೋಜನೆ ಪ್ರಚಾರ ಸಮಿತಿ ರಚಿಸಿ, ಕಾರ್ಯಕರ್ತರಿಗೆ ಬೂತ್ ಮಟ್ಟದ ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು.

ಗ್ಯಾರಂಟಿ ಯೋಜನೆಗಳು ಬಡ ಕುಟುಂಬ ಸದಸ್ಯರಿಗೆ ವರದಾನವಾಗಿವೆ. ಆದ್ದರಿಂದ, ಬೂತ್ ಮಟ್ಟದ ಪ್ರತಿ ಮನೆಗಳಿಗೆ ಹೋಗಿ ಮತಯಾಚಿಸಬೇಕು.

ಜಿಲ್ಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜ್ ಕುಮಾರ್ ಪರ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಸರ್ಕಾರದ ಋಣ ನಮ್ಮ ಮೇಲಿದೆ. ಆ ಋಣ ತೀರಿಸಲು ಅವಕಾಶ ಸಿಕ್ಕಿದೆ. ಖಂಡಿತ ಗೀತಾ ಶಿವರಾಜಕುಮಾರ್ ಅವರಿಗೆ ಬೆಂಬಲಿಸುವುದಾಗಿ ಮತದಾರರು ಭರವಸೆ ವ್ಯಕ್ತಪಡಿಸುತ್ತಿದ್ದಾರೆ ಎಂದರು.

ಕೇಂದ್ರ ಕಾಂಗ್ರೆಸ್ ಪಕ್ಷ ಪ್ರಣಾಳಿಯನ್ನು ಪ್ರತಿ ಮನೆಗಳಿಗೂ ತಲುಪಿಸಬೇಕು. ಯೋಜನೆಗಳ ಕುರಿತ ಅರಿವು ಮೂಡಿಸಬೇಕು. ಬೂತ್ ಮಟ್ಟದಲ್ಲಿ ಹಳ್ಳಿಗಳಿಗೆ ತೆರಳಿ ಗ್ಯಾರಂಟಿ ಯೋಜನೆಯ ಕರಪತ್ರ ಅಂಟಿಸಬೇಕು. ಜನರು ಮಧ್ಯವರ್ತಿಗಳಿಗೆ ಲಂಚ ನೀಡದೆ, ಗ್ಯಾರಂಟಿ ಯೋಜನೆಗಳ ಪ್ರಯೋಜನ ಪಡೆಯುತ್ತಿದ್ದಾರೆ. ಆದ್ದರಿಂದ, ಜನರಿಂದ ಗ್ಯಾರಂಟಿ ಯೋಜನೆಗಳ ಬಗ್ಗೆ ಅಭಿಪ್ರಾಯ ಸಂಗ್ರಹಿಸಬೇಕು. ಇದರ ವಿಡಿಯೋ ಚಿತ್ರಿಕರಿಸಿ ಹರಿಬಿಡಬೇಕು ಎಂದರು.


ಕಾಂಗ್ರೆಸ್ ಗ್ಯಾರಂಟಿಯ ಜಿಲ್ಲಾ ಮಟ್ಟದ ಗ್ಯಾರಂಟಿ ಹಬ್ಬ ಆಚರಿಸಬೇಕು. ಇದೇ, ರೀತಿ ತಾಲ್ಲೂಕು, ಬೂತ್ ಮಟ್ಟದಲ್ಲಿಯೂ ತಮಟೆ ಭಾರಿಸುವ ಮೂಲಕ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆರ್. ಪ್ರಸನ್ನ ಕುಮಾರ, ಕಾಂಗ್ರೆಸ್ ಅಭ್ಯರ್ಥಿ ಗೀತಾ ಶಿವರಾಜಕುಮಾರ, ಕಲಗೋಡು ರತ್ನಾಕರ್, ಜಿ.ಡಿ.ಮಂಜುನಾಥ, ರಮೇಶ್ ಹೆಗ್ಡೆ, ಚಂದ್ರಭೂಪಾಲ್ ಸೇರಿ ಕಾರ್ಯಕರ್ತರು ಇದ್ದರು.'



# ರಾಮನವಮಿ

ಶಿರಾಳಕೊಪ್ಪದ ರಾಮಮಂದಿರದಲ್ಲಿ ರಾಮ ನವಮಿ ಪ್ರಯುಕ್ತ ವಿಶೇಷ ಪೂಜೆ ಸಲ್ಲಿಸಿ ಪಾನಕ ಹಾಗೂ ಕೊಸಂಬರಿ ಪ್ರಸಾದ ವಿತರಿಸಲಾಯಿತು. ಈ ಸಂದರ್ಭದಲ್ಲಿ ದೇವಸ್ಥಾನದ ಅರ್ಚಕಿ ಕುಮುದಾ, ಟೌನ್ ಬಿಜೆಪಿ ಅಧ್ಯಕ್ಷ ಎ.ಸಿ.ಚನ್ನವೀರಪ್ಪ, ಶಕ್ತಿ ಕೇಂದ್ರದ ಅಧ್ಯಕ್ಷ ಚಂದ್ರಶೇಖರ ಮಂಚಾಲೆ ಇದ್ದರು.



Top News ಶಿವಮೊಗ್ಗದ ಮೇಘನಾ

# ಯುಪಿಎಸ್ ಪರೀಕ್ಷೆಯಲ್ಲಿ 589 ನೇ ರ್ಯಾಂಕ್

ಸುದ್ದಿ-ಸಂಚಾರಿ
ಶಿವಮೊಗ್ಗ

ಯುಪಿಎಸ್ ಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ನಿವೃತ್ತ ಅರಣ್ಯ ಅಧಿಕಾರಿ ಐಎಂ ನಾಗರಾಜ್ ಅವರ ಪುತ್ರಿ ಮೇಘನಾ ಐಎಎಸ್ ನಲ್ಲಿ 589 ನೇ ರ್ಯಾಂಕ್ ಪಡೆದಿದ್ದಾರೆ .ಈಗಾಗಲೇ ಮೂರನೇ ಅಟೆಂಪ್ಟ್ ಮುಗಿಸಿರುವ ಮೇಘನಾ ಮಹಾರಾಷ್ಟ್ರದಲ್ಲಿ ಐಪಿಎಸ್ ಪ್ರೊಬೇಷನರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ ಯುಪಿಎಸ್ ಪರೀಕ್ಷೆಯಲ್ಲಿ 617 ನೇ ರ್ಯಾಂಕ್ ಪಡೆದಿರುವ ಮೇಘನಾ ಈಬಾರಿ 589 ರ್ಯಾಂಕ್ ಪಡೆದಿದ್ದಾರೆ.ಇಂಜಿನಿಯರ್ ಆಗಿರುವ ಮೇಘನಾ ಐಪಿಎಸ್ ನಲ್ಲಿ ಆಪ್ಷನಲ್ ವಿಷಯವಾಗಿ ಆಂತ್ರೋಪಾಲಜಿ ವಿಷಯವನ್ನ ಆಯ್ಕೆ ಮಾಡಿಕೊಂಡಿದ್ದರು. ಮೈಸೂರು ಜಿಲ್ಲೆ ಬಂಡೀಪುರ ಮತ್ತು ದಾವಣಗೆರೆಯ ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ್ದಾರೆ. ಶಿವಮೊಗ್ಗದ ಸಾಂದೀಪನಿ ಇಂಗ್ಲಿಷ್ ಶಾಲೆಯಲ್ಲಿ ಪ್ರೌಢಶಿಕ್ಷಣ, ಶಿವಮೊಗ್ಗದ ಪೇಸ್ ಕಾಲೇಜಿನಲ್ಲಿ ಪಿಯುಸಿ ಹಾಗೂ ಬೆಂಗಳೂರಿನ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಕೆಮಿಕಲ್ ಎಂಜಿನಿಯರಿಂಗ್ ಪದವಿ ಪೂರ್ಣಗೊಳಿಸಿದ್ದಾರೆ.

# ಜಿಲ್ಲೆಯಲ್ಲಿ ಮಳೆಯಾಗುವ ಸಾಧ್ಯತೆ

ಸುದ್ದಿಸಂಚಾರಿ | ಶಿವಮೊಗ್ಗ

ಶಿವಮೊಗ್ಗದಲ್ಲಿ ಇವತ್ತು ಕೂಡ ವಿಪರೀತ ಬಿಸಲು ಇರಲಿದೆ. ಕನಿಷ್ಠ 23 ಡಿಗ್ರಿ ಸೆಲ್ಸಿಯಲ್ ಮತ್ತು ಗರಿಷ್ಠ 37 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವಿರಲಿದೆ. ಇನ್ನು ಇವತ್ತು ಮಧ್ಯಾಹ್ನ ಅಥವಾ ಸಂಜೆ ವೇಳೆಗೆ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ವರದಿಯಲ್ಲಿ ತಿಳಿಸಲಾಗಿದೆ.

ಬೆಳಗ್ಗೆ 8 ಗಂಟೆಗೆ 28.3 ಡಿಗ್ರಿ ಸೆಲ್ಸಿಯಸ್ ತಾಪಮಾನ ಇರಲಿದೆ. ಬೆಳಗ್ಗೆ 10 ಗಂಟೆಗೆ 34.3 ಡಿಗ್ರಿ ಸೆಲ್ಸಿಯಸ್, ಮಧ್ಯಾಹ್ನ 12ಕ್ಕೆ 34.8 ಡಿಗ್ರಿ ಸೆಲ್ಸಿಯಸ್, ಮಧ್ಯಾಹ್ನ 2ಕ್ಕೆ 37.9 ಡಿಗ್ರಿ ಸೆಲ್ಸಿಯಸ್, ಸಂಜೆ 4ಕ್ಕೆ37.4 ಡಿಗ್ರಿ ಸೆಲ್ಸಿಯಸ್, ಸಂಜೆ 6ಕ್ಕೆ 28.1 ಡಿಗ್ರಿ ಸೆಲ್ಸಿಯಸ್, ರಾತ್ರಿ 8ಕ್ಕೆ 25.8 ಡಿಗ್ರಿ ಸೆಲ್ಸಿಯಸ್, ರಾತ್ರಿ 10ಕ್ಕೆ 24.8 ಡಿಗ್ರಿ ಸೆಲ್ಸಿಯಸ್‌ಗೆ ತಲುಪಲಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಸುದ್ದಿ-ಸಂಚಾರಿ






# ವೃದ್ದೆಯ ಮಾಂಗಲ್ಯ ಸರ ಅಪಹರಣ

ಸಾಗರ: ನಗರದ ಅಣಲೆಕೊಪ್ಪ ಬಡಾವಣೆಯ ರಾಬಿಯಾ ಮಸೀದಿ ಬಳಿ ವೃದ್ಧೆಯೊಬ್ಬರು ನಡೆದುಕೊಂಡು ಹೋಗುತ್ತಿದ್ದಾಗ ಬೈಕ್‌ನಲ್ಲಿ ಬಂದ ಅಪರಿಚಿತರು ಮಾಂಗಲ್ಯ ಸರವನ್ನು ಅಪಹರಿಸಿರುವ ಘಟನೆ ಮಂಗಳವಾರ ನಡೆದಿದೆ. ವಿಳಾಸ ಕೇಳುವ ನೆಪದಲ್ಲಿ ಶಿರವಾಳ ಗ್ರಾಮದ ಕಡೆಯಿಂದ ಬೈಕ್‌ನಲ್ಲಿ ಬಂದವರು ಶಾಂತಮ್ಮ ಎಂಬುವರ ಮಾಂಗಲ್ಯ ಸರವನ್ನು ಕೀಳಲು ಮುಂದಾಗಿದ್ದಾರೆ. ಇದಕ್ಕೆ ವೃದ್ಧೆ ಪ್ರತಿರೋಧ ವ್ಯಕ್ತಪಡಿಸಿದಾಗ **40** ಗ್ರಾಂ ತೂಕದ ಮಾಂಗಲ್ಯ ಸರದ ಪೈಕಿ **23** ಗ್ರಾಂ ಸರದ ತುಂಡನ್ನು ಕಳ್ಳರು ಎಗರಿಸಿದ್ದಾರೆ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

SWAMY VIVEKANANDA VIDYA SAMSTHE (R), SHIKARIPURA
KUMADVATHI SCIENCE & COMMERCE PU COLLEGE
Hearty Congratulations to Rank Holders & Toppers

ಗುರುವಾರ,18ನೇ ಏಪ್ರಿಲ್,2024 | ● ಸಂಪುಟ-1 | ● ಸಂಚಿಕೆ-58 | ● ಉಚಿತ | ● | ● www.suddisanchaari.in



**ಸೊರಬ** ತಾಲ್ಲೂಕು ಕಟ್ಟಿನಕೆರೆ ಗ್ರಾಮದ ಶ್ರೀಧಾಮ ನಿವಾಸದ ಪ್ರವೇಶ ಸಮಾರಂಭದಲ್ಲಿ ಆಯೋಜಿಸಿದ ಗುರುವಂದನೆ, ಸನ್ಮಾನ

Top News ಭಾಗವತ ಪ್ರಶಾಂತ ಮಧ್ಯಸ್ಥ ಗೊರಮನೆ

# ಕಟ್ಟಿನಕೆರೆಯಲ್ಲಿ ಗುರುವಂದನ ಮತ್ತು ಸನ್ಮಾನ

ಸುದ್ದಿ-ಸಂಚಾರಿ
ಸೊರಬ: ವೃತ್ತಿಪರ ಕಲಾವಿದರಿಗಿಂತ ಮಿಗಿಲಾಗಿ ಹಿರಿಯತನದಲ್ಲಿರುವ ಹವ್ಯಾಸಿ ಕಲಾವಿದರನ್ನು ಗುರುತಿಸಿ ಗೌರವಿಸುವ ಹಾಗೂ ಸನ್ಮಾನಿಸುವ ಪರಂಪರೆ ಸಮಾಜ ಬಾಂಧವರಿಂದ ಮತ್ತು ಕಲಾಭಿಮಾನಿಗಳಿಂದ ಆಗಬೇಕಾದ ಅವಶ್ಯಕತೆ ಇದೆ ಎಂದು ಯಕ್ಷರಂಗದ ಹವ್ಯಾಸಿ ಕಲಾವಿದ, ಅರ್ಥಧಾರಿ, ಭಾಗವತರೂ ಆದ ಪ್ರಶಾಂತ ಮಧ್ಯಸ್ಥ ಗೊರಮನೆ ಅಭಿಪ್ರಾಯ ವ್ಯಕ್ತಪಡಿಸಿದರು.
ತಾಲ್ಲೂಕು ಕಟ್ಟಿನಕೆರೆ ಗ್ರಾಮದ ಶ್ರೀಧಾಮ ನಿವಾಸದ ಪ್ರವೇಶ ಸಮಾರಂಭದಲ್ಲಿ ಆಯೋಜಿಸಿದ ಗುರುವಂದನೆ, ಸನ್ಮಾನ ಮತ್ತು ತಾಳಮದ್ದಳೆ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.
ಯಕ್ಷಗಾನವನ್ನು ನೋಡುವ, ಆಸ್ವಾಧಿಸುವ ಮತ್ತು ಸಕ್ರಿಯವಾಗಿ ಪಾಲ್ಗೊಳ್ಳುವ ಕಲಾವಿದರಿಗೆ ಶಿಷ್ಯರಿಂದ ಗುರುವಂದನೆ ಹಾಗೂ ಗುರುವನ್ನು ಸನ್ಮಾನಿಸುವ ವಿಷಯ ಬಲು ಅಪರೂಪದ ಈ ಸಂದರ್ಭದ ಸನ್ನಿವೇಶವನ್ನು ನೋಡುವ ಭಾಗ್ಯ ಅವರ ಆಪ್ತರಾದ ಹವ್ಯಾಸಿ ಕಲಾವಿದರಿಗೆ ಮತ್ತು ಅಭಿಮಾನಿಗಳಿಗೆ ಸಂತಸ ತರುವ ಹೆಮ್ಮೆಪಡುವ ವಿಷಯವಾಗಿದೆ.
ಈ ಪ್ರದೇಶಗಳಲ್ಲಿ ನಡೆಯುವ ಯಕ್ಷಗಾನ ಮತ್ತು ತಾಳಮದ್ದಳೆಗಳಲ್ಲಿ ಈಗ ಚಂಡೆವಾದಕರಾಗಿ ಪ್ರಸಿದ್ಧರಾದವರಲ್ಲಿ ಈ ಭಾಗದ ಅಶೋಕ ಭಟ್ಟ ಕ್ಯಾಸನೂರು ಅವರೂ ಒಬ್ಬರು. ಇವರು ಬಡಗು ತಿಟ್ಟಿನ
ಯಕ್ಷಗಾನದಲ್ಲಿರುವ ಎಲ್ಲ ಪ್ರಕಾರಗಳ ತತ್ವಸಾರಗಳ ಬದ್ಧತೆಯಲ್ಲಿ ಸರ್ವ ಸಾಮರ್ಥ್ಯವನ್ನೂ ತನ್ನದಾಗಿ ಮೈಗೂಡಿಸಿಕೊಂಡವರು. ಇವರು ಕಲಿತ, ಅರಿತ ಎಲ್ಲಾ ಪ್ರಕಾರಗಳನ್ನೂ ಅಭಿರುಚಿ ಇರುವ, ಕಲಿಕೆಯಲ್ಲಿ ಆಸಕ್ತಿ ಇರುವ ಕಲಾಭಿಮಾನಿಗಳಿಗೆ ಪರಪಾಠ ಮಾಡುವುದರ ಮೂಲಕ ಗುರುವಾಗಿ, ಯಕ್ಷಗಾನ ಶಿಕ್ಷಣ ನೀಡಲು ಸಮರ್ಥರಾಗಿದ್ದಾರೆ. ಇಂಥವರನ್ನು ಶಿಷ್ಯರು ಗೌರವಿಸುವ ಗುರುವಂದನಾ ಕಾರ್ಯಕ್ರಮ ಸಮಯೋಚಿತವಾಗಿದೆ. ಮುಂದೆಯೂ ಹೆಚ್ಚಿನ ಸ್ಥಾನಮಾನದ ಗೌರವ ಇವರಿಗೆ ದೊರಕಲಿ ಎಂದು ಆಶಿಸಿದರು.
ಮಾತಿನ ಚತುರ, ವಾಗಿ ತಾಳಮದ್ದಳೆ ಅರ್ಥದಾರಿ ದೇವೇಂದ್ರ ಬೆಳೆಯೂರು ಮಾತನಾಡಿ, ತಾನು ಕಲಿತ ಕಲೆಯನ್ನು ಬೇರೆಯವರಿಗೆ ಕಲಿಸುವ ವಿಧಾನ ನಿರಂತರವಾಗಿ ಉಳಿಯಬಲ್ಲದು. ಇದೂಕೂಡಾ ಶಿಕ್ಷಣದ ಒಂದು ಭಾಗ. ಇಂಥವರು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಸಹೃದಯರಾಗಬಲ್ಲರು. ಇದರಲ್ಲಿ ಸಿಗುವ ಆನಂದ ಬೇರೆಲ್ಲೂ ಸಿಗದು. ಒಂದು ಊರಿನ ಒಬ್ಬ ಕಲಾವಿದ ಆಯಾ ಊರಿನ ಸಾಂಸ್ಕೃತಿ ಶ್ರೀಮಂತಿಕೆಗೆ ಹೆಗ್ಗುರುತಾಗಬಲ್ಲ. ಇಂತಹ ಸಾಧನೆಗೆ ಸಾಕ್ಷಿಯಾದವರು ಅಶೋಕ ಭಟ್ಟರು. ಇವರಲ್ಲಿರುವ ಕಲಾವಂತಿಕೆ ಮತ್ತು ಕೈ ಚಳಕದ ಚಂಡೆವಾದನ ಯಂಥವರನ್ನೂ ಬೆರಗುಗೊಳಿಸುವಂತಹದ್ದು, ಯಕ್ಷಗಾನದಲ್ಲಿ ಇವರು ಸಲ್ಲಿಸಿದ ಇವರ ಸೇವೆ ಬೇರೆಯವರಿಗೆ ಕಲಿಸುವ ಕ್ರಮ, ಕಲಾಭಿಮಾನಿಗಳಿಗೆ ಆದರ್ಶವಾಗುವ ಬಲು ಅಪರೂಪದ ಸಾಧಕರಾಗಿ ಜನ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಎಂದರು.
ಅಮೃತದೇವ್ ರಂಜನಾ ದಂಪತಿಗಳು, ಪೂರ್ಣಿಮ ಮತ್ತು ಆಶೋಕ ಭಟ್ ದಂಪತಿಗಳಿಗೆ ಗುರುಗಾಣಿಕೆ ಸಲ್ಲಿಸುವ ಮೂಲಕ ಸ್ಮರಣಿಕೆ ನೀಡಿದರು. ಕುಟುಂಬದ ಹಿರಿಯರಾದ ಮಂಜುನಾಥ್ ಸನ್ಮಾನ ಪತ್ರ ನೀಡಿದರು.
ವೇದಿಕೆಯಲ್ಲಿ ಲಲಿತಾ ಮಂಜುನಾಥ್, ರಂಜನಾ ಅಮೃತದೇವ್, ಶಿವರಾಮ ಕಂಚಿ, ಶಂಕರನಾರಾಯಣ, ಬಿ.ಟಿ. ಮಂಜುನಾಥ ಮುಂತಾದವರು ಇದ್ದರು.

## ನೀರು ಪೂರೈಕೆ: ವ್ಯತ್ಯಯ ಇಲ್ಲ

ಶಿವಮೊಗ್ಗ: ಕೃಷ್ಣರಾಜೇಂದ್ರ ಜಲಶುದ್ಧೀಕರಣ ಘಟಕಕ್ಕೆ ವಿದ್ಯುತ್ ಪೂರೈಕೆ ನಿಲುಗಡೆಯನ್ನು ತಾಂತ್ರಿಕ ಕಾರಣದಿಂದ ಮುಂದೂಡಲಾಗಿದೆ.
ಏ.18 ಮತ್ತು 19 ರಂದು ಶಿವಮೊಗ್ಗ ನಗರಕ್ಕೆ ದೈನಂದಿನ ಕುಡಿಯುವ ನೀರು ಸರಬರಾಜಿನಲ್ಲಿ ಯಾವುದೇ ವ್ಯತ್ಯಯವಾಗುವುದಿಲ್ಲ ಎಂದು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಕ್ಕಳಿಗೆ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ

ಬೆಂಗಳೂರು: ಕಲಾ ದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆಯು ಮಕ್ಕಳಿಗಾಗಿ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಮೇ 5ರಂದು ಹಮ್ಮಿಕೊಂಡಿದೆ.
ಈ ಸ್ಪರ್ಧೆಯು 8 ವರ್ಷದೊಳಗಿನ, 12 ವರ್ಷದೊಳಗಿನ ಹಾಗೂ 16 ವರ್ಷದೊಳಗಿನ ಮಕ್ಕಳಿಗೆ ಮೂರು ವಿಭಾಗಗಳಲ್ಲಿ ನಡೆಯಲಿದೆ. ಭಾಗವಹಿಸಿದ ಎಲ್ಲ ಮಕ್ಕಳಿಗೂ ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನು ಕೊಡಲಾಗುತ್ತದೆ. ವಿಜೇತರಿಗೆ ವಿಶೇಷ ಬಹುಮಾನಗಳನ್ನು ನೀಡಲಾಗುತ್ತದೆ.
ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿದೆ. ಆಸಕ್ತರು ವಿವರಕ್ಕೆ 9380671947ಕ್ಕೆ ಸಂಪರ್ಕಿಸಬಹುದು ಎಂದು ಸಂಸ್ಥೆಯ ಕಾರ್ಯದರ್ಶಿ ವಿನಾಯಕ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.